ಶ್ರೀ ಕೆ. ಪ್ರಭಾಕರ್.—ಈ ಹನುಮ ಎಂಬುವನು ಆ ಜಮೀನಿನ ಮಾಲೀಕ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ...ಆತನು ಹರಿಜನ ರೈತ ಎಂಬುದು ಗೊತ್ತಿದೆ. ಆದರೆ ಸರ್ವೆ ನಂಬರ್ 48ರಲ್ಲಿ 18 ಎಕರೆ ಜಮೀನು ಇದೆ. ಆತನಿಗೆ ಆ ಜಮೀನನ್ನು ಅಲ್ಲಿ ಕೊಡುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದ್ದಾರೆ. ಅದು ವಾಟರ್ ವರ್ಕ್ಸ್‌ಗೆ ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಬೇರೆ ಜಮೀನು ಕೊಡಿ ಎಂದು ತಿಳಿಸಿದ್ದೇವೆ.

ಶ್ರೀ ಕೆ. ಪ್ರಭಾಕರ್.—ಅದು ವಾಟರ್ ವರ್ಕ್ಸ್‌ಗೆ ಬೇಕಾಗಿದ್ದರೆ ಅವನು ಬೆಳೆ ಇಟ್ಟಿದ್ದನ್ನು ಕೂಡ ಇವರು ನಷ್ಟಮಾಡಿ ಅವನಿಗೆ ಹೆರಾಸ್ ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಮೀನನ್ನು ವಜಾಮಾಡರಾಗಿದೆ ಎಂದು ಹೇಳಿದರೂ ಖಾಲಿ ಮಾಡದೆ ಇದ್ದದ್ದಕ್ಕೋಸ್ಕರ, ವಜಾಮಾಡಿದಮೇಲೆ ಬೆಳೆಯನ್ನು ಇಟ್ಟಿದ್ದಕ್ಕೆ ಬೆಳೆಯನ್ನು ಅಟ್ಯಾಚ್‌ಮಾಡಿದ್ದಾರೆ. ಆ ಬೆಳೆಯನ್ನು ಹರಾಜು ಮಾಡಿ ಅದರಲ್ಲಿ 130 ರೂಪಾಯಿ ಬಂದಿದೆ. ಈ ರೀತಿ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿದ್ದರಿಂದ ಈ ಕಾರ್ಯಕ್ರಮವನ್ನು ಹೆರಾಸ್‌ಮೆಂಟ್ ಎಂದು ಭಾವಿಸುವುದಕ್ಕೆ ಆಗುವುದಿಲ್ಲ.

Fixation of Minimum Wages, etc., for Agricultural Labourers.

206. Sri K. SRIRAMULU (Gandhinagar).—

Will the Minister for Labour aud Tourism be pleased to state :—

(*a*) whether Government has fixed the working hours, wages and income of Agricultural Labourers also like other workers for whom working hours, wages and other benefits have been fixed in accordance with the law in the State ; whether Government intends to bring any legislation in this regard or have already brought them into force ;

(*b*) if so, what are the legislations ?

Sri S. M. YAHYA (Minister for Labour and Tourism).—

(*a*) and (*b*) Yes. Minimum Rates of wages for Agricultural Labourers have been fixed under the Minimum Wages Act, 1948 and the same were revised with effect from 2nd October 1973 in Government Notification No. SWL 2 LMW 71, dated 21st August 1973.

The rules made under the said Act provide for a wage period which shall not exceed one month and also for a weekly holiday of rest which shall be a paid holiday. Further it is provided that no adult worker shall work for more than 9 hours and child worker for more than 4 hours per day.

ಶ್ರೀ ಕೆ. ಶ್ರೀರಾಮುಲು.—ಸ್ವಾಮಿ, ತಮ್ಮ ಉತ್ತರದಲ್ಲಿ 1948ನೇ ಇಸವಿಯಿಂದ ಜಾರಿಗೆ ಬಂದಿದ್ದರೂ 1973ನೇ ಇಸವಿಯಲ್ಲಿ ರಿವೈಸ್ ಮಾಡಿ ಜಾರಿಗೆ ಕೊಡಲಾಗಿದೆ. ಇದರಿಂದ ರೈತ ಕಾರ್ಮಿಕರಿಗೆ ಬೇರೆ ಕಾರ್ಖಾನೆಗಳಲ್ಲಿ ಕೆಲಸಮಾಡುವ ನೌಕರರಿಗೆ ಸಿಕ್ಕುವ ಇ. ಎಸ್. ಐ. ಮತ್ತು ಪ್ರಾವಿಡೆಂಟ್ ಫಂಡ್ ಸ್ಕೀಮ್ ಮುಂತಾದುವು ಇವರಿಗೆ ಸಿಕ್ಕುತ್ತಾ ಇಲ್ಲ.

† ಶ್ರೀ ಎಸ್. ಎಂ. ಯಾಹ್ಯಾ.—1948ರಲ್ಲಿ ಮಿನಿಮಮ್ ವೇಜಸ್ ಆಕ್ಟ್ ಆಗಿದ್ದರೂ ಕೂಡ ಅದನ್ನು 1960 ರಿಂದ ಅಗ್ರಿಕಲ್ಚರ್ ಲೇಬರರ್ಸ್‌ಗೆ ಕೊಡುತ್ತಾ ಇವೆ. ಇಂಡಸ್ಟ್ರಿಯಲ್ ಲೇಬರ್‌ನವರಿಗೆ ಕೊಡುವಷ್ಟು ಅವರಿಗೂ ಕೊಡಬೇಕೆಂದು ಹೇಳಿ ಸರ್ಕಾರ ಹೊಂದ

ಯೋಜನೆ ಮಾಡುತ್ತಾ ಇದೆ. ಈ ಅಗ್ರಿಕಲ್ಚರ್ ಲೇಬರರ್ಸ್‌ಗೆ ವಿಶೇಷವಾಗಿ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿರುವಂತೆ ಕೆಲವು ಅನುಕೂಲತೆಯನ್ನು ಮುಂದೆ ಕೊಡಬೇಕು. ಈಗ ಲ್ಯಾಂಡ್ ರೀ ಫಾರಮ್ಸ್ ಆಕ್ಟ್ ಬಂದಿದೆ. ಸರ್‌ಪ್ಲಸ್ ಜಮೀನಿದ್ದರೆ ಅದನ್ನು ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಕೊಟ್ಟು ಅವರ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂದು ಇದೆ. ಇನ್ನೊಂದು ಏನಾಗಿದೆ ಎಂದರೆ ಇದನ್ನು ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ ಸೇರಿಸಿ ಒಂದು ಕಾಂಪ್ರಹೆನ್ಸೀವ್ ಆಕ್ಟ್‌ವಾಡಿ ಕೇರಳದಲ್ಲಿರುವ ರೀತಿ ಮಾಡಬೇಕೆಂದು ಮಾನ್ಯ ಅಗ್ರಿಕಲ್ಚರ್ ಮಂತ್ರಿಗಳಿಗೆ ಹೇಳಿದ್ದೇನೆ. ಅದಕ್ಕೆ ಅವರು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ತಮ್ಮ ಉತ್ತರದಲ್ಲಿ ಹೇಳಿದ್ದೀರಿ ರೈತ ಕಾರ್ಮಿಕರು ದೊಡ್ಡವರು, ದಿನಕ್ಕೆ 9 ಗಂಟೆಗಳ ಕಾಲ ಕೆಲಸಮಾಡಬೇಕು, ಮಕ್ಕಳು $4\frac{1}{2}$ ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು. ಪಟ್ಟಣಗಳಲ್ಲಿರುವವರು ಕೇವಲ ದಿನಕ್ಕೆ 6—8 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ, ಇದರಿಂದ ಅನ್ಯಾಯವಾಗುವುದಿಲ್ಲವೇ ?

ಶ್ರೀ ಎಸ್. ಎಂ. ಯಾಹ್ಯಾ.—ಇಂಡಸ್ಟ್ರಿಯಲ್ ಲೇಬರರ್ಸ್‌ಗೂ, ಅಗ್ರಿಕಲ್ಚರಲ್ ಲೇಬರರ್ಸ್‌ಗೂ ಬಹಳ ವ್ಯತ್ಯಾಸವಿದೆ. ಇಂಡಸ್ಟ್ರೀಯಲ್ ಮತ್ತು ಅಗ್ರಿಕಲ್ಚರ್ ಲೇಬರರ್ಸ್‌ಗೆ ಒಂದೇ ವಿಧವಾಗಿ ಮಾಡುವುದಾದರೆ ಅದು ಒಂದು ವಿಶೇಷವಾದ ಸಮಸ್ಯೆಯಾಗಬಹುದು. ಆದ್ದರಿಂದ ಇವೆಲ್ಲವನ್ನೂ ವಿಚಾರಮಾಡಿ ಶಿಫಾರಸ್ಸು ಮಾಡಬೇಕಾಗುತ್ತದೆ. ಇಂಡಸ್ಟ್ರೀಯಲ್ ಲೇಬರರ್ಸ್‌ಗೆ ಟ್ರೇಡ್ ಯೂನಿಯನ್‌ಗಳು ಇವೆ. ಅಗ್ರಿಕಲ್ಚರರ್ ಲೇಬರರ್ಸ್‌ಗೆ ಅವರ ಕೈವಾಡ ಇರುವುದಿಲ್ಲ. ಆದ್ದರಿಂದ ಇವರ ಸಮಸ್ಯೆಗಳು ಬಗೆಹರಿದಿಲ್ಲ. ಹೆಚ್ಚಿಗೆ ಇಂಡಸ್ಟ್ರಿಯಲ್ ಏರಿಯಾಗಳಲ್ಲೇ ಆರ್ಗನೈಜೇಷನ್ಸ್ ಜಾಸ್ತಿಯಾಗಿರುವುದು. ಈ ಅಗ್ರಿಕಲ್ಚರಲ್ ಲೇಬರರ್ಸ್‌ಗೂ ಯೂನಿಯನ್‌ಗಳು ಆದರೆ ಇನ್ನು ಮುಂದೆ ಇವರಿಗೆ ಸೌಕರ್ಯ ಜಾಸ್ತಿಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೃಷಿಕಾರ್ಮಿಕರ ವ್ಯಾಪ್ತಿ ಮಾನ್ಯ ಸಚಿವರಿಗೆ ಸೇರುವುದಿಲ್ಲ. ಆದ್ದರಿಂದ ಕಾರ್ಮಿಕರ ಸಮಸ್ಯೆಗಳನ್ನು ಇತ್ಯರ್ಥ ಮಾಡುವುದಕ್ಕೆ ಆಗುವುದಿಲ್ಲ. ಅವರಿಗೆ ರಕ್ಷಣೆ ಸಿಕ್ಕುತ್ತಿಲ್ಲ. ಆದ್ದರಿಂದ ಕೈಗಾರಿಕಾ ಕ್ಷೇತ್ರದಲ್ಲಿರುವಂತೆ ಈ ವ್ಯವಸಾಯ ಕಾರ್ಮಿಕರಿಗೂ ಸಹಾಯ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತೀರಾ ?

Sri S. M. YAHYA.—Ours is a changing Society and we can see more economic and social changes. Therefore, we find there are certain changes in the agricultural labourers also. They have been neglected from decades and therefore we are giving more attention as far as agricultural labourers are concerned.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ.—ಸ್ವಾಮಿ, ಈ ಅಗ್ರಿಕಲ್ಚರಲ್ ಲೇಬರರ್ಸ್ ಆಕ್ಟ್ ಇನ್ನೂ ಜಾರಿಗೆ ಬರಲಿಲ್ಲ. ಇದು ಎಕ್ಸ್ ಪ್ಲಾಯಿಟೆಡ್ ಸೆಕ್ಷನ್. ದೇಶದ ಸಂಪತ್ತನ್ನು ಹೆಚ್ಚಿಸತಕ್ಕವರು ಕೃಷಿ ಕಾರ್ಮಿಕರು. ಇವರು ಈ 24 ಗಂಟೆ ಕೆಲಸ ಮಾಡುತ್ತಾರೆ, ಇವರ ರಕ್ಷಣೆಗಾಗಿ ಒಂದು ವಿಶೇಷ ಸಮಿತಿಯನ್ನು ರಚನೆಮಾಡಿ ಅವರು ವರದಿಯನ್ನು ಕೊಟ್ಟರೆ ಅದನ್ನು ಪರಿಶೀಲನೆ ಮಾಡುತ್ತೀರಾ ? ಮತ್ತು ಅವರಿಗೆ ನಿಗದಿ ಮಾಡಿದಂಥ ದಿನಗೂಲಿ ಜಾರಿಯಲ್ಲಿಡಿಯೇ ? ಜಾರಿಯಲ್ಲಿಲ್ಲದಿದ್ದರೆ ಜಾರಿಗೆ ತರುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಒಳ್ಳೆಯ ಸಲಹೆಯನ್ನು ಕೊಟ್ಟರೆ ಅದನ್ನು ಖಂಡಿತಾ ಪರಿಶೀಲನೆ ಮಾಡುತ್ತೇವೆ. ಮೊಟ್ಟಮೊದಲನೆಯದಾಗಿ ಮಿನಿಮಂ ವೇಜಸ್ ಆಕ್ಟ್ 1960ರಲ್ಲಿ ಬಂದು, ಮಿನಿಮಂ ವೇಜಸ್ ಫಿಕ್ಸ್ ಮಾಡಿದ್ದು ಖಂಡಿತಾ ಕಡಿಮೆಯಾಯಿತು. ಈಗ ಲ್ಯಾಂಡ್ ಲಾರ್ಡ್ ಸ್ವಲ್ಪ ಜಾಸ್ತಿ ಕೂಲಿಯನ್ನು ಕೊಡುತ್ತಿದ್ದಾರೆ. ನಾವು ಪುನಃ ಅದನ್ನ ರಿವೈಸ್ ಮಾಡಿದ್ದೇವೆ. ರಿವೈಸ್ ಮಾಡಿದರೂ ಕೂಡ ಕೆಲವು ಕಡೆ ಅದರಂತೆ ದಿನಗೂಲಿಯನ್ನು ಕೊಡದೆ ಇರಬಹುದು, ಅಂಥವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಅವರಿಗೆ ಅನ್ಯಾಯ ಆಗದೆ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ವ್ಯವಸಾಯದ ಕೂಲಿಗಾರರಿಗೆ, ಅವರ ಕಸುಬುಗನುಸಾರವಾಗಿ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೀರಾ ? ಟ್ರೈನಿಂಗ್ ಆಗಿಲ್ಲದೆ ಇರತಕ್ಕ ಲೇಬರರ್ಸ್‌ಗೆ ಕೂಲಿಯನ್ನು ಗೊತ್ತುಮಾಡಬೇಕಾದರೆ ಯಾವ ಕ್ರಮವನ್ನು ತಾವು ಅನುಸರಿಸುತ್ತೀರಿ ?

ಶ್ರೀ ಎಸ್. ಎಂ. ಯಾಹ್ಯಾ.—ಅಗ್ರಿಕಲ್ಚರ್ ಬೌಂಡರಿ ಲೇಬರರ್ಸ್‌ಗೆ ಟ್ರೈನಿಂಗ್ ಕೊಡತಕ್ಕದ್ದು ನಮ್ಮ ಇಲಾಖೆಗೆ ಸೇರಿಲ್ಲ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಸೇರಿದೆ. ಅದಕ್ಕಾಗಿ ನಾವು ಒಂದು ಅಮೂರಾಗ್ರವಾದ ಆಕ್ಟ್ ಮಾಡಬೇಕು ಎಂದು ಯೋಚನೆ ಮಾಡಿ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀಮತಿ ದಮಯಂತಿ ಬೋರೇಗೌಡ.—ರಾಜ್ಯದಲ್ಲಿ ರೈತರ ಸಂಘಟನೆಯಾಗದೆ ಇರುವಾಗ ರೈತ ಕಾರ್ಮಿಕರ ಸಂಘಟನೆಯನ್ನು ಮಾಡಿ ಈ ಆಕ್ಟ್‌ನ್ನು ಜಾರಿಗೆ ತರುವುದು ಸಾಧ್ಯವಿಲ್ಲವೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಶಾಸನಕರು ಮತ್ತು ಸಮಾಜದ ನಾಯಕರು ಎಲ್ಲರೂ ಮಾಡುವಂಥ ಕೆಲಸ. ನಾವೇ ನಮ್ಮ ತಿಳಿವಳಿಕೆಯಿಂದ ಅವರ ಸಂಘಟನೆ ಮಾಡಿದರೆ ಒಳ್ಳೆಯ ಕೆಲಸಗಳನ್ನು ನಾವು ಮಾಡಬಹುದು.

ಶ್ರೀ ಕೆ. ಶ್ರೀರಾಮುಲು.—ಯಾರು ರೈತರಿಂದ ಮತ ಪಡೆದು ಬಂದಿದ್ದಾರೆ ಅವರು ಮೊದಲು ಈ ಕೆಲಸವನ್ನು ಮಾಡಬೇಕು. ಅವರು ಯೂನಿಯನ್‌ಗಳನ್ನು ಮಾಡಿ ಈ ಆಕ್ಟ್ ಜಾರಿಗೆ ತರುವಂತೆ ಮಾಡಬೇಕಾದದ್ದು ಅವರ ಕರ್ತವ್ಯವಲ್ಲವೇ ?

ಶ್ರೀ ಎಸ್. ಎಂ. ಯಾಹ್ಯಾ.—ರೈತರ ಪರಿಸ್ಥಿತಿಯನ್ನು ಉತ್ತಮಗೊಳಿಸುವುದೇ ನಮ್ಮ ಸರ್ಕಾರದ ಉದ್ದೇಶವಾಗಿದೆ.

Re-organisation of Social Welfare Department

220 Sri M. B. RAMASWAMY (Anekal).—

Will the Minister for Community Development and Social Welfare be pleased to state.-

(*a*) whether the Government has re-organised the Social Welfare Department ;

(*b*) whether it has come to the notice of the Government that the re-organisation has come into good stand to only class I and Class II officers of the Department, whereas the other officials like Women Welfare Organisers, Hostel Superintendents, Social Welfare Inspectors, First Division Clerks are not benefited by it ;

(*c*) the steps the Government intends to take to improve the service conditions of these officials in respect of their seniority and promotions ;

(*d*) the number of officers who are there in the Direotorate of Social Welfare for more than 10 years ?

Sri N. RACHAIAH (Minister for Community Development and Social Welfare).—

(*a*) Re-organisation of the Department at State level, Divisional level, and at the institutional level was done in the year 1970. Further re-organisation of the Department at Taluk level, District level and at State level is under consideration of the Government.

(*b*) The re-organisation of the Social Welfare Department sanctioned in the year 1970 has benefited not only the class I and class II officers but also class III officials.